ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾದ ದಿನಾಂಕ : 01.04.2026

ಮುಂದುವರೆದ **ಮುಖ್ಯ ವಿಚಾರಣೆ:** ಅರ್ಜಿದಾರರ ಪರ ಶ್ರೀ ಸಿ.ಎನ್ ವಕೀಲರಿಂದ :

ನಾನು ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನನ್ನ ಪರವಾಗಿ ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಪ್ರಾಥಿಸಿಕೊಳ್ಳುತ್ತೇನೆ.

1. ದೂರಿನ ಧೃಢೀಕೃತ ಪ್ರತಿಯನ್ನು ನಿಪಿ 1 ಎಂದು,

2. ಕೆ ಆರ್ ಪೇಟೆ ಟೌನ್ ಪೊಲೀಸ್ ಠಾಣೆಯ ಕ್ರೈಂ ನಂಬರ್ 231/2024 ರ ಪ್ರಥಮ ವರ್ತಮಾನ ವರದಿಯ ಧೃಢೀಕೃತ ಪ್ರತಿಯನ್ನು ನಿಪಿ 2 ಎಂದು,

3. ಅಪರಾಧ ವಿವರ ನಮೂನೆಯ ಧೃಢೀಕೃತ ಪ್ರತಿಯನ್ನು ನಿಪಿ 3 ಎಂದು,

4. ಎರಡು ಅಮಾನತ್ತು ಮಹಜರ್ ನ ಧೃಢೀಕೃತ ಪ್ರತಿಗಳನ್ನು ನಿಪಿ 4 ಮತ್ತು ನಿಪಿ 5 ಎಂದು,

5. ಅಪಘಾತಕ್ಕೀಡಾದ ವಾಹನಗಳ ಎರಡು ಯಾಂತ್ರೀಕಾ ಪರೀಕ್ಷಾ ವರದಿಗಳ ಧೃಢೀಕೃತ ಪ್ರತಿಗಳನ್ನು ನಿಪಿ 6 ಮತ್ತು ನಿಪಿ 7 ಎಂದು,

6. ಅರ್ಜಿದಾರರ ಗಾಯದ ಪ್ರಮಾಣ ಪತ್ರದ ಧೃಢೀಕೃತ ಪ್ರತಿಯನ್ನು ನಿಪಿ 8 ಎಂದು,

7. ಎಂ ಎಲ್ ಸಿ ವಹಿ ಮತ್ತು ವರದಿಯ ಧೃಢೀಕೃತ ಪ್ರತಿಗಳನ್ನು ನಿಪಿ 9 ಮತ್ತು ನಿಪಿ 10 ಎಂದು,

8. ದೋಷಾರೋಪಣಾ ಪತ್ರದ ಧೃಢೀಕೃತ ಪ್ರತಿಯನ್ನು ನಿಪಿ 11 ಎಂದು,

9. ಸಿ ಸಿ ನಂಬರ್ 241/2025 ರ ಆದೇಶದ ಪುಟದ ಧೃಢೀಕೃತ ಪ್ರತಿಯನ್ನು ನಿಪಿ 12 ಎಂದು,

10. ಅಂತಿಮ ಮೆಡಿಕಲ್ ಬಿಲ್ಲುಗಳನ್ನು ನಿಪಿ 13 ಮತ್ತು ನಿಪಿ 14 ಎಂದು ಗುರುತಿಸಲಾಯಿತು.

ಈ ಎಲ್ಲಾ ಕಾರಣಗಳಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಎದುರುದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.